# ಹಾವೇರಿ: ಆರೋಗ್ಯ ಇಲಾಖೆಯಲ್ಲಿ 119 ಹುದ್ದೆಗಳು

## ನವೆಂಬರ್ 17 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ಅನುಭವಿಗಳಿಗೆ ಆದ್ಯತೆ

ಹಾವೇರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 119 ವಿವಿಧ ಖಾಲಿ ಹುದ್ದೆಗಳಿಗೆ ಗುತ್ತಿಗೆ ಆಧಾರದಡಿ ನೇಮಕಾತಿಗೆ ಅಧಿಸೂಚನೆ ಪ್ರಕಟಿಸಿದೆ. ಆಸಕ್ತ, ಅರ್ಹ ಅಭ್ಯರ್ಥಿಗಳು ನವೆಂಬರ್ 17ರೊಳಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಅರ್ಜಿ ಸಲ್ಲಿಸಬಹುದು.

**ಹುದ್ದೆಗಳು ಮತ್ತು ಶಿಕ್ಷಣಾರ್ಹತೆ:** ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು 17: ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ಕಡ್ಡಾಯವಾಗಿ ನೋಂದಣಿಯಾಗಿರಬೇಕು.

**ಶುಶ್ರೂಷಾಧಿಕಾರಿಗಳು 82:** ಜಿಎನ್‌ಎಂ ತರಬೇತಿ ಪಡೆದಿರಬೇಕು. ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ಕಡ್ಡಾಯವಾಗಿ ನೋಂದಣಿಯಾಗಿರಬೇಕು.

**ಆಶಾ ಮೇಲ್ವಿಚಾರಕರು 5:** ಜಿಎನ್‌ಎಂ/ಬಿ.ಎಸ್.ಎಂ/ಬಿ.ಎಸ್ಸಿ (ನರ್ಸಿಂಗ್) ಮಾಡಿರಬೇಕು. ಅಥವಾ ಪಬ್ಲಿಕ್ ಹೆಲ್ತ್ ಡಿಪ್ಲೊಮಾ/ ಸೋಷಿಯಲ್ ವರ್ಕ್/ ಸೋಷಿಯಲ್ ಸೈನ್ಸ್‌ನಲ್ಲಿ ಪದವಿ/ಸ್ನಾತಕೋತ್ತರ ಪದವಿ, ಕಂಪ್ಯೂಟರ್ ಜ್ಞಾನ ಇರಬೇಕು. 2-3 ವರ್ಷಗಳ ಕಾಲ ತರಬೇತಿ ಅನುಭವವಿರಬೇಕು.

**ಆಯುಷ್ ಮೆಡಿಕಲ್ ಆಫೀಸರ್ 3:** ಬಿಎಎಮ್‌ಎಸ್/ಎಂಬಿಬಿಎಸ್ ಮಾಡಿರಬೇಕು. ಕಡ್ಡಾಯವಾಗಿ ಹೌಸ್‌ಮನ್‌ಶಿಪ್ ಮುಗಿಸಿರಬೇಕು. ವೃತ್ತಿ ನೋಂದಣಿ ಮಾಡಿಕೊಂಡಿರಬೇಕು.

**ಆಪ್ತಲಮಿಕ್ ಅಸಿಸ್ಟೆಂಟ್/ ಫಾರ್ಮಾಸಿಸ್ಟ್ (ಆರ್‌ಬಿಎಸ್‌ಕೆ) 2:** 2 ವರ್ಷಗಳ ಅಪ್ಟೊಮೆಟ್ರಿ ಡಿಪ್ಲೊಮಾ ಮಾಡಿರಬೇಕು ಅಥವಾ ಸರಕಾರಿ ಆಸ್ಪತ್ರೆಗಳಲ್ಲಿ ನೇತ್ರ ಸಹಾಯಕರು (ಆಪ್ತಲಮಿಕ್ ಅಸಿಸ್ಟೆಂಟ್) ಆಗಿ ಎನ್‌ಪಿಸಿಬಿ ತರಬೇತಿ ಪಡೆದಿರಬೇಕು. ಫಾರ್ಮಾಸಿಸ್ಟ್‌ಗಳು 'ಬಿ' ಫಾರ್ಮ್ ಮಾಡಿರಬೇಕು. ಕಂಪ್ಯೂಟರ್



ತಿಳಿದಿರಬೇಕು.

**ಡಯಟ್ ಕೌನ್ಸಿಲರ್ 1:** ಬಿ.ಎಸ್ಸಿ/ಬಿ.ಎ ನ್ಯೂಟ್ರಿಷನ್ ಪದವಿ/ಗೃಹ ವಿಜ್ಞಾನ ಪದವಿ ಮಾಡಿರಬೇಕು.

**ಸಿವಿಲ್ ಎಂಜಿನಿಯರ್ 1:** ಸಿವಿಲ್/ ಎಲೆಕ್ಟ್ರಿಕಲ್/ ಮೆಕಾನಿಕಲ್ ವಿಷಯದಲ್ಲಿ ಬಿಇ /ಬಿಟೆಕ್ ಮಾಡಿರಬೇಕು. 2 ವರ್ಷ ಆಸ್ಪತ್ರೆಯಲ್ಲಿ ಕೆಲಸ ಮಾಡಿರಬೇಕು.

**ಬಯೋ ಮೆಡಿಕಲ್ ಎಂಜಿನಿಯರ್ 1:** ಬಯೋ ಮೆಡಿಕಲ್ ಎಂಜಿನಿಯರಿಂಗ್/ ಮೆಡಿಕಲ್ ಎಲೆಕ್ಟ್ರಾನಿಕ್/ ಎಂಎಸ್ಸಿ ಇನ್ ಬಯೋ ಮೆಡಿಕಲ್ ಇನ್‌ಸ್ಟ್ರುಮೆಂಟೇಷನ್ ವಿಷಯದಲ್ಲಿ ಬಿಇ /ಬಿಟೆಕ್ ಮಾಡಿರಬೇಕು. 2 ವರ್ಷ ಆಸ್ಪತ್ರೆಯಲ್ಲಿ ಕೆಲಸ ಮಾಡಿರಬೇಕು.

**ಪಂಚಕರ್ಮ ಥೆರಪಿಸ್ಟ್ 1:** ಬಿ.ಎಸ್ಸಿ (ಯೋಗ ಮತ್ತು ಪ್ರಕೃತಿ ಚಿಕಿತ್ಸೆ), ಅಥವಾ ಮಸ್ಸಾಜಿಸ್ಟ್ ತರಬೇತಿ ಪಡೆದಿರಬೇಕು. ಜನರಲ್ ನರ್ಸಿಂಗ್ ಕೋರ್ಸ್ / ಡಿಪ್ಲೊಮಾ ನರ್ಸಿಂಗ್/ ಬಿ.ಎಸ್ಸಿ ನರ್ಸಿಂಗ್ ಮಾಡಿರಬೇಕು.

**ಮೇಲ್ ಹೆಲ್ತ್ ವರ್ಕರ್ (ಎನ್‌ಯುಎಚ್‌ಎಂ) ಫಾರ್ಮಾಸಿಸ್ಟ್ 1:** ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ರಾಜ್ಯ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯಿಂದ ತರಬೇತಿ ಪಡೆದಿರಬೇಕು. 2 ಅಥವಾ 3 ವರ್ಷಗಳ ಆರೋಗ್ಯ ನಿರೀಕ್ಷಕರ ಡಿಪ್ಲೊಮಾ ಹೊಂದಿರಬೇಕು.

**ಡೆಂಟಲ್ ಹೈಜನಿಸ್ಟ್ 1:** ಪಿಯುಸಿ ಸೈನ್ಸ್ ಮತ್ತು ಡೆಂಟಲ್ ಹೈಜನಿಸ್ಟ್‌ನಲ್ಲಿ ಡಿಪ್ಲೊಮಾ ಮಾಡಿರಬೇಕು. 2 ವರ್ಷ ಅನುಭವ ಇರಬೇಕು.

**ಡೆಂಟಲ್ ಟೆಕ್ನಿಷಿಯನ್ 1:** ಪಿಯುಸಿ ಸೈನ್ಸ್, ಡೆಂಟಲ್ ಟೆಕ್ನಿಷಿಯನ್‌ನಲ್ಲಿ ಡಿಪ್ಲೊಮಾ ಮಾಡಿರಬೇಕು. 2 ವರ್ಷ ಡೆಂಟಲ್ ಕಾಲೇಜಿನಲ್ಲಿ ಕೆಲಸ ಮಾಡಿದ ಅನುಭವ ಇರಬೇಕು.

**ಆಡಿಯೋಮೆಟ್ರಿಕ್ ಅಸಿಸ್ಟೆಂಟ್ 1:** ಹಿಯರಿಂಗ್ ಲಾಂಗ್ವೇಜ್ (ಕೇಳುವ ಭಾಷೆ) ಮತ್ತು ಸ್ಪೀಚ್‌ನಲ್ಲಿ (ಡಿಎಚ್‌ಎಲ್‌ಎಸ್) ಒಂದು ವರ್ಷದ ಡಿಪ್ಲೊಮಾ ಮಾಡಿರಬೇಕು.

**ಇನ್‌ಸ್ಟ್ರಕ್ಟರ್ ಫಾರ್ ಹಿಯರಿಂಗ್ ಇಂಪೇರ್‌ಮೆಂಟ್ ಚಿಲ್ಡ್ರನ್ 1:** ಯಂಗ್ ಡೆಫ್ ಅಂಡ್ ಹಿಯರಿಂಗ್ ಹ್ಯಾಂಡಿಕ್ಯಾಪ್ಡ್ (ಯುವ ಕಿವುಡ ಮತ್ತು ಶ್ರವಣ ವಿಕಲಚೇತನರಿಗೆ ಡಿಟಿಯುಡಿಎಚ್‌ಎಚ್) ತರಬೇತಿ ನೀಡುವಲ್ಲಿ ಡಿಪ್ಲೊಮಾ ಮಾಡಿರಬೇಕು.

**ಇಎನ್‌ಟಿ ಸ್ಪೆಷಲಿಸ್ಟ್ 1:** ಎಂ.ಎಸ್ ಇನ್ ಇ.ಎನ್.ಟಿ /ಡಿಪ್ಲೊಮಾ ಇನ್ ಇ.ಎನ್.ಟಿ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದಲ್ಲಿ ಮಾನ್ಯತೆ ಪಡೆದ ಸಂಸ್ಥೆಯಿಂದ ಪದವಿ ಪ್ರಮಾಣ ಪತ್ರವನ್ನು ಪಡೆದಿರಬೇಕು.

ಹೆಚ್ಚಿನ ಮಾಹಿತಿಗೆ ಮೊಬೈಲ್ ನಂಬರ್ 9449843198 ಸಂಪರ್ಕಿಸಬಹುದು ಅಥವಾ ಕಚೇರಿ ಅವಧಿಯಲ್ಲಿ ಹಾವೇರಿಯ ಜಿಲ್ಲಾಡಳಿತ ಭವನ ದೇವಗಿರಿ (ಆರೋಗ್ಯ ಇಲಾಖೆ) ಜಿಲ್ಲಾ ಯೋಜನಾ ನಿರ್ವಹಣಾ ಘಟಕಕ್ಕೆ ಭೇಟಿ ನೀಡಬಹುದು.

**ವಿಳಾಸ:** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ರಾಷ್ಟ್ರೀಯ ಆರೋಗ್ಯ ಅಭಿಯಾನ ಬಿ ಬ್ಲಾಕ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣ, ಜಿಲ್ಲಾ ಆಡಳಿತ ಭವನ, ದೇವಗಿರಿ, ಹಾವೇರಿ: 581110